ಅವರ ಹೊರಗಿನ ನಡೆವಳಿಕೆಗಳು ಗಂಭೀರವಾಗಿದ್ದರೂ, ಅವರು ಮೃದುಹೃದಯಿಗಳಾಗಿದ್ದರು. ಕೊಯಂಬತ್ತೂರು ನಗರವು ಪ್ಲೇಗಿನಿಂದ ಪೀಡಿತವಾಗಿ ವಿನಾಶಕ್ಕೆ ಈಡಾದಾಗ, ಕೆಲವು ಮಕ್ಕಳು ಅಸಹಾಯಕರಾಗಿ ಅಲ್ಲಿಂದಿಲ್ಲಿಗೆ ಓಡಾಡುತ್ತಿರುವುದನ್ನು ಕಂಡು ಅವರ ಹೃದಯ ಮರುಗಿತು. ಆ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಅವರು ಒಂದು ಅನಾಥಾಲಯವನ್ನು ಸ್ಥಾಪಿಸಿದರು. ಈಗ ಅದು ಅತಿ ದೊಡ್ಡ ಶುಲ್ಕರಹಿತ ನಿವಾಸಿ ಶಿಕ್ಷಣ ಕೇಂದ್ರವಾಗಿ ಬೆಳೆದಿದೆ.

ಪ್ರೀತಿ ಮತ್ತು ನಿಷ್ಠುರತೆಯ ಸಮತೋಲನ ದೃಷ್ಟಿಯನ್ನು ಇಟ್ಟುಕೊಂಡು ಅವರು ತಮ್ಮಲ್ಲಿಗೆ ಬಂದ ಹೊಸಬರಿಗೆ ತರಬೇತಿ ನೀಡಿದರು. ಅವರೆಲ್ಲರೂ ಕಾಲಕ್ರಮೇಣ ಸಮರ್ಥ ಸಾಧುಗಳಾಗಿ ಕಾರ್ಯ ನಿರ್ವಹಿಸಿದರು.

ತಮ್ಮ ಸ್ವಂತ ಆಧ್ಯಾತ್ಮಿಕ ಜೀವನದಲ್ಲಿ ಗಾಢಧ್ಯಾನದ ಜೊತೆಗೆ, ಅವರು ಭಗವದ್ಗೀತೆಯ ಮತ್ತು ವಿಷ್ಣುಸಹಸ್ರನಾಮದ ಪಾರಾಯಣದಲ್ಲಿ ಉತ್ಸುಕರಾಗಿದ್ದರು. ಅವರು ಈ ಪಾರಾಯಣವನ್ನು ಎಂದೂ ತಪ್ಪಿಸುತ್ತಿರಲಿಲ್ಲ.

ಹಿಂದೂಧರ್ಮ-ಸಂಪ್ರದಾಯಬದ್ಧರಾಗಿ ಅವರು ದಿನದ ಶುಭ ಮತ್ತು ಅಶುಭ ಕಾಲಗಳನ್ನು ಜಾಗರೂಕತೆಯಿಂದ ಆಚರಿಸುತ್ತಿದ್ದರು. ಆ ದಿನಗಳಲ್ಲಿ ಏನಾದರೂ ಶಾಸ್ತ್ರೀಯ ಕರ್ಮಗಳನ್ನು ಮಾಡಬೇಕಾದಲ್ಲಿ ಅದನ್ನು ತಪ್ಪದೆ ಮಾಡುತ್ತಿದ್ದರು.

ಎರಡನೆಯದಾಗಿ, ಅವರ ಜೀವನದ ಇನ್ನೊಂದು ಮಹತ್ತ್ವದ ಭಾಗವೆಂದರೆ, ತಮ್ಮ ಗುರುಗಳಾದ ಶ್ರೀರಾಮಕೃಷ್ಣರಲ್ಲಿ ಇಟ್ಟಿದ್ದ ಗಾಢವಾದ ಭಕ್ತಿ ಮತ್ತು ಅವರನ್ನು ಪೂಜಿಸುತ್ತಿದ್ದ ಅನನ್ಯವಾದ ಅದ್ಭುತವಾದ ರೀತಿ.

ಅಧಿಕ ಸಂಖ್ಯೆಯ ಭಕ್ತರುಗಳಾದ ನಮಗೆ ಶ್ರೀರಾಮಕೃಷ್ಣರ ಫೋಟೋ, ಅಥವಾ ಚಿತ್ರವು, ಕಾಗದದ, ಗಾಜಿನ, ಮರದ ಭೌತಿಕ ವಸ್ತುವಾದರೂ ಅದು ಒಂದು ಪವಿತ್ರ ಪ್ರತೀಕವಾದುದರಿಂದ ನಾವು ಅದಕ್ಕೆ ಗೌರವ ಮತ್ತು ಪೂಜೆಗಳನ್ನು ಸಲ್ಲಿಸುವುದು ರೂಢಿಯಾಗಿದೆ. ಏಕೆಂದರೆ ಅದು ನಮ್ಮ ಮನಸ್ಸಿಗೆ ಜೀವಂತ ಹಾಗೂ ಪ್ರಜ್ಞಾಪೂರ್ವಕ ದೇವತೆಯ ಇರುವಿಕೆಯನ್ನು ಕೊಡುತ್ತದೆ.

ಆದರೆ ರಾಮಕೃಷ್ಣಾನಂದರು ಆಳವಾದ ಶ್ರದ್ಧಾಭಕ್ತಿಯುಳ್ಳವರಾಗಿದ್ದರಿಂದ ಅವರಿಗೆ, ಅದು ಕೇವಲ ಒಂದು ಚಿತ್ರ ಅಥವಾ ಪ್ರತೀಕವಾಗಿರದೆ, ಸ್ವಯಂ ಶ್ರೀರಾಮಕೃಷ್ಣರೇ ರಕ್ತಮಾಂಸಗಳಿಂದ ಕೂಡಿದ ದೇಹಧಾರಿಗಳಾಗಿ, ಸಜೀವರಾಗಿ, ಸಂಪೂರ್ಣ ಪ್ರಜ್ಞೆಯುಳ್ಳವರಾಗಿರುವರೆಂದು ತೋರುತ್ತಿತ್ತು. ಹೀಗಾಗಿ ಅವರ ಇಡೀ ಶಾಸ್ತ್ರೋಕ್ತ ಪೂಜಾಪದ್ಧತಿಯು ಮತ್ತು ಸೇವೆಗಳು ಈ ಭಾವನೆಗೆ ಅನುಗುಣವಾಗಿರುತ್ತಿದ್ದವು.

ಅವರ ಗುರುಗಳು ಅಥವಾ ದೇವತೆಯು ಜೀವಂತವಾಗಿ ಗರ್ಭಗುಡಿಯಲ್ಲಿ ವಾಸಿಸುತ್ತಿದ್ದು ಮತ್ತು ಇವರ ಜೊತೆಯೇ ಇರುತ್ತಿದ್ದುದರಿಂದ ನಿವೇದನೆಗೆ ಏನೂ ಆಹಾರ ಸಿಗದಿದ್ದರೆ, ಭಕ್ತರು ಏನಾದರೂ ವಸ್ತುಗಳನ್ನು ತಂದುಕೊಡದೆ ಇದ್ದ ಸಮಯದಲ್ಲಿ, ಅವರು ತಮ್ಮ ಗುರುಗಳೊಡನೆ ಕಲಹವಾಡುತ್ತಿದ್ದರು. ಒಮ್ಮೆ ನಿವೇದನೆಗೆ ಏನೂ ಸಿಗದಿದ್ದಾಗ, ಅವರು ಸಮುದ್ರ ತೀರದ ಮರಳಿನ ಉಂಡೆಗಳನ್ನೇ ಅರ್ಪಿಸಿ ಅದನ್ನೇ ತಿನ್ನುವುದಾಗಿ ಹೇಳಿದ ಪ್ರಸಿದ್ಧ ಘಟನೆಯಿದೆ! ಆಗ ಆಶ್ಚರ್ಯ ಎಂಬಂತೆ, ಭಕ್ತನೊಬ್ಬನು ಆಹಾರಸಾಮಗ್ರಿಗಳನ್ನು ಸರಿಯಾದ ಕಾಲದಲ್ಲಿ ತಂದು ಕೊಟ್ಟಾಗ, ರಾಮಕೃಷ್ಣಾನಂದರು ತಕ್ಷಣವೇ ಲೂಚಿ (ಪೂರಿ) ಮತ್ತು ಹಲ್ವ ತಯಾರಿಸಿ, ಬಿಸಿಬಿಸಿಯಾಗಿ ಶ್ರೀರಾಮಕೃಷ್ಣರಿಗೆ ಅರ್ಪಿಸಿ, ಮುಗ್ಧ ಬಾಲಕನಂತೆ ಸಂತೋಷಪಟ್ಟರು. ರಾಮಕೃಷ್ಣಾನಂದರು ಶ್ರೀರಾಮಕೃಷ್ಣದೇವರಿಗೆ ಬೇಸಿಗೆಯ ಕಡುತಾಪದ ದಿನಗಳಲ್ಲಿ ಬೀಸಣಿಗೆಯಿಂದ ತಾಸುಗಟ್ಟಲೆ ಗಾಳಿ ಬೀಸುವ, ಅಥವಾ ಕಟ್ಟಡದ ಸೂರಿನ ರಂಧ್ರದಿಂದ ಮಳೆಯ ನೀರು ರಾಮಕೃಷ್ಣರ ಚಿತ್ರದ ಮೇಲೆ ಬೀಳುವುದನ್ನು ತಪ್ಪಿಸಲು ಇಡೀ ರಾತ್ರಿ ಕೊಡೆಯನ್ನು ಹಿಡಿದು ಸೇವೆ ಸಲ್ಲಿಸುವ ದೃಶ್ಯಗಳು, ಅಥವಾ ನಿವೇದನೆಗೆ ಹಣ್ಣುಗಳನ್ನು, ಆಹಾರ ಪದಾರ್ಥಗಳನ್ನು ಸಿದ್ಧಪಡಿಸುವಲ್ಲಿ ತೆಗೆದುಕೊಳ್ಳುತ್ತಿದ್ದ ಎಚ್ಚರಿಕೆಗಳು, ನಯನಮನೋಹರವಾಗಿರುತ್ತಿದ್ದವು.

ಅವರು ಪೂಜೆ ಮತ್ತು ಕೈಂಕರ್ಯಗಳಿಗೆ ಸಂಬಂಧಿಸಿದಂತೆ ಇರುವ ಕೆಲಸಗಳಲ್ಲಿ ಕೊಂಚ ಅಜಾಗರೂಕತೆಯಾದರೂ, ಅದನ್ನು ಎಂದೂ ಸಹಿಸುತ್ತಿರಲಿಲ್ಲ. ರಾಮಕೃಷ್ಣಾನಂದರ ದೀರ್ಘಕಾಲದ ದಕ್ಷಿಣ ಭಾರತದ ವಾಸದ ಭಕ್ತಿಗಾಥೆಯು, ಶ್ರದ್ಧಾವಂತ ಭಕ್ತರುಗಳಿಗೆ, ಭಗವತ್ಸಾಕ್ಷಾತ್ಕಾರ ಬಯಸುವವರಿಗೆ, ಪರಿಪೂರಿತ ಅನುಭವಗಳಿಂದ ತುಂಬಿ ಮಾರ್ಗದರ್ಶಿಯಾಗಿದೆ.

ಶತಮಾನಗಳಿಂದ ಹಿಂದೂ ಸಂನ್ಯಾಸಿ ಜೀವನವು ಸ್ವಂತ ಮುಕ್ತಿಯ ಅಥವಾ ಬಿಡುಗಡೆಯ ಕಿರುಪಥ್ಯಕ್ಕೆ ಸೀಮಿತಗೊಂಡು, ಇಡೀ ಸಮಾಜದ ಹಿತಕ್ಕೆ ಯಾವ ಚಿಂತನೆಯೂ ನಡೆದಿರಲಿಲ್ಲ. ತೊಡಕಾದ ಹಿಂದೂ ಧರ್ಮಾಚರಣೆಗಳು ದೈವೀಮುಖವಾಡದ ಸ್ವಂತ ಹಿತಾಸಕ್ತಿಯ ಪೂರಕಕ್ರಿಯೆಗಳಾಗಿ ನೆಲಕಚ್ಚಿದ್ದವು. ರಾಮಕೃಷ್ಣಾನಂದರು ಈ ಇಬ್ಬಗೆಯ ಧಾರ್ಮಿಕ-ಆಧ್ಯಾತ್ಮಿಕ ಕ್ರಿಯೆಗಳನ್ನು ಮೇಲಕ್ಕೆ ಎತ್ತಿದುದೇ ಅಲ್ಲದೆ ಅವುಗಳಲ್ಲಿ ಪರಿವರ್ತನೆಯನ್ನೂ ತಂದರು.

'ಕ್ರಿಯೆ ಮತ್ತು ಆರಾಧನೆ'ಯ ಭಾವನೆಯನ್ನು (ಇದು ಸ್ವಾಮಿ ವಿವೇಕಾನಂದರ ಬೋಧನೆಗಳಿಂದ- ಕ್ರಮೇಣ ಕ್ರಿಯೆಯೇ ಆರಾಧನೆ ಎಂಬ ಎತ್ತರಕ್ಕೆ ಏರಿತು) ಸಂನ್ಯಾಸಿ ಜೀವನಕ್ಕೆ ಜೋಡಿಸಿ ಒಂದು ಹೊಸ ಆಯಾಮವನ್ನೇ ತಂದುಕೊಟ್ಟರು. ಈ ಕೆಲಸವಾಗುವಾಗ ಸಂನ್ಯಾಸಿ ಜೀವನದ ಭಾಗವಾದ ವೈರಾಗ್ಯ ಮತ್ತು ತ್ಯಾಗಗಳನ್ನು ತ್ಯಜಿಸಲಿಲ್ಲ. ಇದಕ್ಕೆ ಪೂರಕವಾಗಿ ಅವರ ಅಪಾರ ವಿದ್ವತ್ತು, ಅವರ ಜೀವನವನ್ನು, ಶುದ್ಧತೆಯನ್ನು ಅಂದಗೊಳಿಸಿತು.

ತಮ್ಮ ಜೀವನದ ಸರ್ವಸ್ವವೇ ಆಗಿದ್ದ ಶ್ರೀರಾಮಕೃಷ್ಣರ ವಿಧ್ಯುಕ್ತ ಪೂಜೆಯನ್ನು, ಅತಿ ಸಣ್ಣ ವಿಷಯಗಳಿಗೂ ಹೆಚ್ಚಿನ ಗಮನ ಕೊಟ್ಟು ಸಿದ್ಧಮಾಡಿ, ಶ್ರದ್ಧಾಭಕ್ತಿಗಳೊಡನೆ ಮಾಡಿ, ಅವರು ಈ ರೀತಿಯ ಪೂಜೆಯನ್ನು ಹೇಗೆ ಮಾಡಬೇಕೆಂದು ಮಾರ್ಗ ತೋರಿದ್ದಾರೆ. ಅವರು ತೀವ್ರಭಕ್ತಿಭಾವದಿಂದ ಮಾಡುತ್ತಿದ್ದ ಪೂಜೆಯು, ಅಲ್ಲಿರುತ್ತಿದ್ದ ಜಡ ವೀಕ್ಷಕರ ಮನಸ್ಸನ್ನೂ ಎತ್ತರಕ್ಕೆ ಕರೆದೊಯ್ಯುತಿತ್ತು. ಅವರಿಗೆ ಶ್ರೀರಾಮಕೃಷ್ಣರ ಭಾವಚಿತ್ರವು, ಶ್ರೀರಾಮಕೃಷ್ಣರೇ ಅಲ್ಲಿ ಜೀವಂತವಾಗಿ ಇರುವರೆಂಬ ಭಾವನೆ ಯನ್ನುಂಟುಮಾಡುತ್ತಿತ್ತು.

ಹಿಂದೂ ಸಂನ್ಯಾಸಾಶ್ರಮ ಸಂಪ್ರದಾಯಕ್ಕೆ ಮತ್ತು ಧರ್ಮಾಚರಣೆಗಳಿಗೆ ಸ್ವಾಮಿ ರಾಮಕೃಷ್ಣನಂದರ ಕೊಡುಗೆ, ನಿಜವಾಗಿ ಹೇಳಬೇಕೆಂದರೆ ಸರಿಸಾಟಿಯಿಲ್ಲದ್ದು, ಅನುಪಮವಾದದ್ದು! *

ಸ್ವಾಮಿ ನಿತ್ಯಸ್ಥಾನಂದ

# ಜ್ಞಾನ ಮತ್ತು ವಿಜ್ಞಾನ




ನಾವು ಜ್ಞಾನವನ್ನು ಅನೇಕ ವಿಧಾನಗಳ ಮೂಲಕ ಪಡೆಯುತ್ತೇವೆ. ಸಾಮಾನ್ಯ ಇಂದ್ರಿಯಗಳ ಮೂಲಕ ಪಡೆಯುವುದು ಒಂದು ಬಗೆಯ ಜ್ಞಾನ. ಇದು ಕೇವಲ ವಸ್ತುಗಳನ್ನು ಗುರುತಿಸುವುದು ಅಷ್ಟೆ. ಪ್ರಾಣಿಗಳೂ ಇದೇ ರೀತಿಯ ಜ್ಞಾನವನ್ನು ಪಡೆಯುತ್ತವೆ. ಆದರೆ ಮಾನವನು ಇಷ್ಟರಿಂದಲೇ ತೃಪ್ತನಾಗದೆ ಅನೇಕ ವಿಧಾನಗಳನ್ನು ಅನುಸರಿಸಿ, ತನ್ನ ಬುದ್ಧಿಯನ್ನೂ ಉಪಯೋಗಿಸಿ ತನ್ನ ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತಾ ಹೋಗುತ್ತಾನೆ. ಅಷ್ಟೆ ಅಲ್ಲದೆ ಆ ಜ್ಞಾನವನ್ನು ವ್ಯಾವಹಾರಿಕ ಜೀವನದಲ್ಲಿ ಬಳಸಿಕೊಂಡು ಸಂಸ್ಕೃತಿ ಮತ್ತು ನಾಗರಿಕತೆಯಲ್ಲಿ ಅವನು ಮುಂದುವರಿಯುತ್ತಾನೆ. ಆದರೆ ಇದೆಲ್ಲವೂ ಮೂಲಭೂತವಾಗಿ ಇಂದ್ರಿಯಾನುಭವವನ್ನೇ ಅವಲಂಬಿಸಿರುವುದು. ಮಾನವನು ಜ್ಞಾನವನ್ನು ಪಡೆಯುವುದು ಮಾತ್ರವಲ್ಲದೆ, ಅದನ್ನು ನಿತ್ಯಜೀವನದಲ್ಲಿ ಉಪಯೋಗಿಸಿಕೊಳ್ಳುತ್ತಾನೆ. ಅಗ್ನಿಯ ಜ್ಞಾನವನ್ನು ಪಡೆಯುವುದು ಒಂದು, ಅದನ್ನು ಉಪಯೋಗಿಸಿಕೊಳ್ಳುವುದು ಇನ್ನೊಂದು. ಹೀಗೆ ಜ್ಞಾನದ ಮೂರು ಹಂತಗಳನ್ನು ಗುರುತಿಸಬಹುದು – ಇಂದ್ರಿಯಜ್ಞಾನ, ಬೌದ್ಧಿಕಜ್ಞಾನ ಮತ್ತು ಅನುಭವಜ್ಞಾನ. ಇಂದ್ರಿಯಜ್ಞಾನವು ಪ್ರಾಣಿ ಮತ್ತು ಮನುಷ್ಯರಿಗೆ ಸಮಾನವಾದುದು. ಮನುಷ್ಯನು ಇದನ್ನು ಮೀರಿ ಹೋಗಿ ತನ್ನ ಬುದ್ಧಿ, ಭಾಷೆ ಮತ್ತು ಇನ್ನೂ ಅನೇಕ ಉಪಕರಣಗಳ ಮೂಲಕ, ಹಾಗೂ ವಿವಿಧ ಜ್ಞಾನಗಳನ್ನು ಒಂದಕ್ಕೊಂದು ಸಂಬಂಧಿಸುತ್ತ, ವಿಸ್ತಾರವಾದ ಜ್ಞಾನಪ್ರಪಂಚವನ್ನೇ ನಿರ್ಮಿಸುತ್ತಾನೆ. ಅವನು ಇನ್ನೂ ಮುಂದುವರಿದು ತಾಂತ್ರಿಕತೆ ಮತ್ತು ವಿವಿಧ ಕಲೆಗಳ ಮೂಲಕ ಈ ಜ್ಞಾನವನ್ನು ಅನುಭವಿಸುತ್ತಾನೆ. ಶ್ರೀರಾಮಕೃಷ್ಣರು ನೀಡುವ ಉದಾಹರಣೆಯ ಮೂಲಕ ವಿವರಿಸುವುದಾದರೆ, ಹಾಲನ್ನು ನೋಡುವುದು ಇಂದ್ರಿಯಜ್ಞಾನ, ಅದು ಏನು ಎಂದು ವೈಜ್ಞಾನಿಕವಾಗಿ ತಿಳಿದುಕೊಳ್ಳುವುದು ಬೌದ್ಧಿಕ ಜ್ಞಾನ, ಮತ್ತು ಅದನ್ನು ಕುಡಿದು ಪೌಷ್ಟಿಕತೆಯನ್ನು ಪಡೆಯುವುದು ಅನುಭವ ಜ್ಞಾನ.

ಇದನ್ನೇ ಆಧ್ಯಾತ್ಮಿಕ ಜೀವನಕ್ಕೆ ಅನ್ವಯಿಸಿದರೆ, ಆಧ್ಯಾತ್ಮಿಕ ವಿಷಯಗಳನ್ನು ತಿಳಿದುಕೊಳ್ಳುವುದು ಒಂದು, ಅದನ್ನು ಅನುಭವಿಸುವುದು ಇನ್ನೊಂದು. ಶ್ರೀಕೃಷ್ಣನು ಒಂದನ್ನು ಜ್ಞಾನವೆಂದೂ ಇನ್ನೊಂದನ್ನು ವಿಜ್ಞಾನವೆಂದೂ ಕರೆಯುತ್ತಾನೆ.

**ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।**
**ಯಜ್ಜ್ಞಾತ್ವಾ ನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ ॥**
**(೭ : ೨)**

"ವಿಜ್ಞಾನಸಹಿತವಾದ ಜ್ಞಾನವನ್ನು ಸ್ವಲ್ಪವೂ ಬಿಡದೆ ನಾನು ನಿನಗೆ ಹೇಳುತ್ತೇನೆ. ಇದನ್ನು ತಿಳಿದುಕೊಂಡರೆ ಇಲ್ಲಿ ಇನ್ನೇನೂ ತಿಳಿದುಕೊಳ್ಳುವುದಕ್ಕೆ ಉಳಿಯುವುದಿಲ್ಲ."

**'ಸವಿಜ್ಞಾನಂ'** ಎಂಬುದಕ್ಕೆ **ಸ್ವಾನುಭವ ಸಂಯುಕ್ತಂ**–'ಸ್ವಂತ ಅನುಭವದಿಂದ ಕೂಡಿರುವುದು' ಎಂಬ ವಿವರಣೆಯನ್ನು ಶ್ರೀಶಂಕರಾಚಾರ್ಯರು ನೀಡುತ್ತಾರೆ. ಅಂದರೆ ಶ್ರೀಕೃಷ್ಣನು ಇಲ್ಲಿ ಬೋಧಿಸುವ ಜ್ಞಾನವು ಕೇವಲ ಬೌದ್ಧಿಕ ಜ್ಞಾನವಲ್ಲ, ಅನುಭವಸಹಿತವಾದ ಜ್ಞಾನ. ನಮ್ಮಲ್ಲನೇಕರ ಆಧ್ಯಾತ್ಮಿಕ ಜೀವನ ಬೌದ್ಧಿಕ ಜ್ಞಾನದಲ್ಲಿಯೇ ಕೊನೆಗೊಳ್ಳುತ್ತದೆ. ಆಧ್ಯಾತ್ಮಿಕ ವಿಷಯಗಳನ್ನು ಚಿಂತಿಸುವುದು, ಅವುಗಳ ಬಗ್ಗೆ ಬರೆಯುವುದು, ಉಪನ್ಯಾಸ ನೀಡುವುದು, ಮತ್ತು ಅವುಗಳ ಆಧಾರದ ಮೇಲೆ ಮತ, ತತ್ತ್ವಗಳನ್ನು ವಿಸ್ತರಿಸುವುದು– ಇವುಗಳೆಲ್ಲ ಒಂದು ಬೌದ್ಧಿಕ ಕಲೆ. ಇವುಗಳಲ್ಲಿಯೇ ಮುಳುಗಿ ಹೋದರೆ ಆಧ್ಯಾತ್ಮಿಕ ಆದರ್ಶವು ಕಣ್ಮರೆಯಾಗಿ ಹೂವಿನ ಸೌಂದರ್ಯಕ್ಕೆ ಮಾರುಹೋಗಿ ಮಕರಂದವನ್ನು ಸವಿಯದ ದುಂಬಿಯಂತಾಗುತ್ತೇವೆ. ಶ್ರೀರಾಮಕೃಷ್ಣರು ಹೇಳುವಂತೆ ಎಲೆ ಎಣಿಸುವುದರಲ್ಲೇ ಮಗ್ನರಾಗಿ ಹಣ್ಣು ತಿನ್ನುವುದನ್ನೇ ಮರೆಯುತ್ತೇವೆ. ಆದ್ದರಿಂದಲೇ ಶ್ರೀಕೃಷ್ಣನು ಹೇಳುತ್ತಾನೆ.

**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।**
**ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ (೭ : ೩)**

"ಸಾವಿರಾರು ಮನುಷ್ಯರಲ್ಲಿ ಎಲ್ಲೋ ಕೆಲವರು ಆಧ್ಯಾತ್ಮಿಕ ಉನ್ನತಿಗಾಗಿ ಪ್ರಯತ್ನಿಸುತ್ತಾರೆ. ಈ ರೀತಿ ಪ್ರಯತ್ನಿಸುವ ಸಿದ್ಧರಲ್ಲೂ ಕೆಲವರು ಮಾತ್ರ ಭಗವಂತನನ್ನು ಯಥಾರೂಪವಾಗಿ ಅರಿಯುತ್ತಾರೆ." ಅನೇಕರು ಆಧ್ಯಾತ್ಮಿಕ ಜೀವನಕ್ಕೆ ಆಕರ್ಷಿತರಾಗಿ ಬರುತ್ತಾರೆ. ಕೆಲವರು ಸ್ವಲ್ಪ ಮನಶ್ಶಾಂತಿಯನ್ನು ಪಡೆದು ಅಷ್ಟರಲ್ಲೇ ತೃಪ್ತರಾಗಿ ಸಾಧನೆಯನ್ನು ಬಿಟ್ಟುಬಿಡುತ್ತಾರೆ. ಮತ್ತೆ ಕೆಲವರು ಇತರರಿಗೆ ಬೋಧಿಸುವುದರಲ್ಲೇ ಮಗ್ನರಾಗಿ ಆದರ್ಶವನ್ನು ಮರೆಯುತ್ತಾರೆ. ಇನ್ನು ಕೆಲವರು ಬೌದ್ಧಿಕ ತೃಪ್ತಿಯನ್ನು ಪಡೆದು ಮುಂದುವರಿಯುವುದೇ ಇಲ್ಲ. ಈ ಶಾಂತಿ ತೃಪ್ತಿ ಮುಂತಾದವುಗಳೆಲ್ಲ ಆಧ್ಯಾತ್ಮಿಕ ಯಾತ್ರೆಯ ಮಧ್ಯದಲ್ಲಿ ದೊರೆಯುವ ತಂಗುದಾಣಗಳಿದ್ದಂತೆ. ಆದರೆ ತಂಗುದಾಣವೇ ಯಾತ್ರೆಯ ಗುರಿಯಲ್ಲ. ರನ್ನಿಂಗ್ ರೇಸ್‌ನಲ್ಲಿ ಅನೇಕರು ಓಡುತ್ತಾರೆ, ಆದರೆ ಒಬ್ಬರೋ ಇಬ್ಬರೋ ಗುರಿಮುಟ್ಟುತ್ತಾರೆ.

ಜ್ಞಾನವನ್ನು ಇನ್ನೊಂದು ರೀತಿಯಲ್ಲಿ ವಿಭಾಗಿಸಲಾಗಿದೆ– ಸಾಂಕೇತಿಕ ಜ್ಞಾನ (symbolic knowledge) ಮತ್ತು ನಿಕಟ ಜ್ಞಾನ (intimate knowledge). ನಾವು ಆಲೋಚನೆಗಳ ಮೂಲಕ ಪಡೆಯುವ ಜ್ಞಾನವೆಲ್ಲ ಸಾಂಕೇತಿಕವಾದುದು, ಅಂದರೆ ಅದು ಶಬ್ದಮಯವಾದುದು. ಈ ಶಬ್ದಮಯ ಜ್ಞಾನವು ವಸ್ತುವಿನ ನಿಜಸ್ವರೂಪವನ್ನು ನೀಡುವುದಿಲ್ಲ. ಈ ಶಬ್ದಮಯ ಜ್ಞಾನವೆಲ್ಲವೂ ಸತ್ಯದ ಬಗ್ಗೆ ನಮ್ಮ ವ್ಯಾಖ್ಯಾನ (interpretation) ಅಷ್ಟೆ, ಅದೇ ಸತ್ಯವಲ್ಲ. ಸತ್ಯದ ನಿಕಟ ಅರಿವು ನಮಗುಂಟಾಗಬೇಕಾದರೆ ಈ 'ಶಬ್ದ' ಅಡಗಬೇಕು – ಅಂದರೆ ಮನಸ್ಸು ಶಾಂತವಾಗಬೇಕು. ನಾವು ಏನನ್ನಾದರೂ ನೋಡಿದಾಗ, ಕೇಳಿದಾಗ ಆಲೋಚನೆಗಳಿಂದ ಅದನ್ನು ಮುಚ್ಚಿಬಿಡುತ್ತೇವೆ, ಅದನ್ನು ಅನುಭವಿಸುವುದಿಲ್ಲ. ಬುದ್ಧನಿಗೆ ಸಂಬಂಧಿಸಿದ ಒಂದು ಸುಂದರ ಕಥೆ ಇದೆ. ಬುದ್ಧನು ತನ್ನ ಕೆಲವರು ಶಿಷ್ಯರೊಡನೆ ಒಂದು ಹೂದೋಟದಲ್ಲಿ ಸುತ್ತುತ್ತಿದ್ದನು. ಒಂದು ಸುಂದರವಾದ ಹೂವನ್ನು ತೋರಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಶಿಷ್ಯರಿಗೆ ಹೇಳಿದನು. ಒಬ್ಬನು ಆ ಹೂವಿನ ಮೇಲೆ ಒಂದು ಸುಂದರವಾದ ಪ್ರಬಂಧವನ್ನೇ ಬರೆದನು, ಮತ್ತೊಬ್ಬನು ಒಂದು ಅದ್ಭುತ ಕವನವನ್ನು ರಚಿಸಿದನು. ಬುದ್ಧನ ನಿಕಟ ಶಿಷ್ಯನಾದ ಶಾರೀಪುತ್ರನು ಆ ಹೂವನ್ನು ದಿಟ್ಟಿಸಿ ನೋಡಿ ಮುಗುಳ್ನಕ್ಕನು. ಅವನೇ ನಿಜವಾಗಿ ಹೂವನ್ನು ಅನುಭವಿಸಿದವನು ಎಂದು ಬುದ್ಧನು ಅಭಿಪ್ರಾಯಪಟ್ಟನು. ಶಬ್ದಾರಣ್ಯದಲ್ಲಿ ನಮ್ಮನ್ನು ನಾವೇ ಕಳೆದುಕೊಳ್ಳುತ್ತಿರುವೆವು.

ನಮ್ಮ ದೈನಂದಿನ ವ್ಯಾವಹಾರಿಕ ಜೀವನಕ್ಕೂ ಇದು ಅನ್ವಯಿಸುತ್ತದೆ. ನಾವು ವ್ಯಕ್ತಿಯನ್ನು ವ್ಯಕ್ತಿಯಾಗಿ ನೋಡದೆ ಅವನ ಬಗ್ಗೆ ನಮಗಿರುವ ಅಭಿಪ್ರಾಯಕ್ಕನುಗುಣವಾಗಿ ನೋಡುತ್ತೇವೆ. ನಮ್ಮ ಅಭಿಪ್ರಾಯಗಳನ್ನು ಬದಿಗೊತ್ತಿ ವ್ಯಕ್ತಿ ಮತ್ತು ವಸ್ತುಗಳನ್ನು ಆದಷ್ಟು ವಾಸ್ತವಿಕ ದೃಷ್ಟಿಯಿಂದ ನೋಡುವುದನ್ನು ನಾವು ಕಲಿತರೆ ನಮ್ಮ ಪರಸ್ಪರ ಮಾನವೀಯ ಸಂಬಂಧವು ಅತ್ಯುತ್ತಮವಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ದೃಷ್ಟಿಗೆ ಅನುಗುಣವಾಗಿ ಇತರರು ಹೀಗೇ ಇರಬೇಕೆಂದು ನಾವು ನಿರೀಕ್ಷಿಸುತ್ತೇವೆ. ಹಾಗಿರದಿದ್ದಾಗ ಅಸಮಾಧಾನವುಂಟಾಗುತ್ತದೆ, ಮನಸ್ತಾಪವುಂಟಾಗುತ್ತದೆ. ನಾವು ಆಧ್ಯಾತ್ಮಿಕ ಆದರ್ಶವುಳ್ಳವರಾಗಿದ್ದರೆ, ಇತರರೂ ನಮ್ಮಂತೆಯೇ ಆಧ್ಯಾತ್ಮಿಕ ವ್ಯಕ್ತಿಗಳಾಗಿರಬೇಕೆಂದು ಬಯಸುತ್ತೇವೆ. ನಮ್ಮ ಆದರ್ಶಕ್ಕೆ ಸ್ವಲ್ಪವೂ ಸಹಾನುಭೂತಿ ತೋರಿಸದೆ, ತಮ್ಮದೇ ಆದ ಟಿ.ವಿ. ಸಂಸ್ಕೃತಿಯ ಜೀವನವನ್ನು ನಡೆಸುವವರೊಂದಿಗೆ ಬಾಳುವುದು ಅತ್ಯಂತ ಕಷ್ಟಸಾಧ್ಯವಾಗುತ್ತದೆ. ಎಷ್ಟೋ ಕುಟುಂಬಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿಯೂ ಕೂಡ ಇದು ಅನಿವಾರ್ಯವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಆಧ್ಯಾತ್ಮಿಕ ಸಾಧಕನು ಏನು ಮಾಡಬೇಕು? ಶ್ರೀಕೃಷ್ಣನು ಭರವಸೆ ನೀಡುತ್ತಾನೆ:

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್**
**॥ ೯ : ೨೨ ॥**

"ಅನ್ಯ ಚಿಂತೆಗಳನ್ನೆಲ್ಲ ಬಿಟ್ಟು ಯಾರು ನನ್ನನ್ನೇ ಪೂಜಿಸುತ್ತಾರೊ, ನಿತ್ಯವೂ ಅಧ್ಯಾತ್ಮ ಚಿಂತನೆಯಲ್ಲಿಯೇ ತೊಡಗಿರುವ ಅಂತಹವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ." ಇಲ್ಲಿ ಯೋಗಕ್ಷೇಮವೆಂದರೆ ಭೌತಿಕ ಆವಶ್ಯಕತೆಗಳು ಮಾತ್ರವಲ್ಲ, ಅವರಿಗೆ ಅನುಕೂಲವಾದ ಆಧ್ಯಾತ್ಮಿಕ ಪರಿಸರವನ್ನು ಅವನೇ ಕಲ್ಪಿಸಿಕೊಡುತ್ತಾನೆ. ಇದು ಅವರ ನಿಷ್ಠೆಯನ್ನು ಅವಲಂಬಿಸಿರುತ್ತದೆ. ನಮಗೆ ತಾಳ್ಮೆ ಬೇಕು. ತುಂಬ ಗೊಣಗುತ್ತಿದ್ದರೆ, ವಾತಾವರಣವನ್ನು, ವ್ಯಕ್ತಿಗಳನ್ನು ಮಾನಸಿಕವಾಗಿ ಶಪಿಸುತ್ತಿದ್ದರೆ, ಅದು ನಮ್ಮ ಅಧ್ಯಾತ್ಮ ನಿಷ್ಠೆಯ ಕೊರತೆಯನ್ನು ಸೂಚಿಸುತ್ತದೆ ಮತ್ತು ಭಗವಂತನೂ ಸುಮ್ಮನಿರುತ್ತಾನೆ.

ಅನುಭವವೇ ನಿಜವಾದ ಜ್ಞಾನ. ಇದನ್ನೇ ಶ್ರೀಕೃಷ್ಣನು ಇಲ್ಲಿ **'ಜ್ಞಾನ'**ವೆಂದು ಕರೆದಿರುವುದು. ಇದು ಅನುಭವಾತ್ಮಕವಾಗಿರುವುದರಿಂದ ಇದನ್ನು **'ಸವಿಜ್ಞಾನಂ'** ಎಂದು ಕರೆಯುತ್ತಾನೆ. ಇದನ್ನು ಅರಿತ ಮೇಲೆ ಇನ್ನೇನೂ ತಿಳಿಯುವುದಕ್ಕೆ ಉಳಿಯುವುದಿಲ್ಲವೆಂದು ಶ್ರೀಕೃಷ್ಣನು ಹೇಳುತ್ತಾನೆ. ಎಲ್ಲವೂ ಭಗವನ್ಮಯವಾದುದರಿಂದ ಭಗವಂತನನ್ನೇ ಅರಿತ ಮೇಲೆ ಅರಿಯುವುದಕ್ಕೆ ಇನ್ನೇನು ಉಳಿಯುತ್ತದೆ? ಮುಂಡಕೋಪನಿಷತ್ತಿನ ಆರಂಭದಲ್ಲಿಯೇ ಒಂದು ಪ್ರಸಂಗ ಬರುತ್ತದೆ. ತೀಕ್ಷ್ಣಮತಿಯ ಒಬ್ಬ ಶಿಷ್ಯನು ಗುರುವಿನೆಡೆಗೆ ಹೋಗಿ, **ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ** – "ಯಾವುದನ್ನು ತಿಳಿದರೆ ಇದೆಲ್ಲವನ್ನೂ ತಿಳಿದಂತಾಗುತ್ತದೆ?" ಎಂದು ಪ್ರಶ್ನಿಸುತ್ತಾನೆ. ಇದಕ್ಕೆ ಉತ್ತರವಾಗಿ ಗುರುವು ಪರಾವಿದ್ಯೆಯ ವಿಷಯವಾಗಿ ಶಿಷ್ಯನಿಗೆ ಉಪದೇಶಿಸುತ್ತಾನೆ. **ಪರಾವಿದ್ಯೆ** ಎಂದರೆ ಆತ್ಮಾ ಅಥವಾ ಪರಬ್ರಹ್ಮನಿಗೆ ಸಂಬಂಧಿಸಿದ ಅನುಭವಾತ್ಮಕ ಜ್ಞಾನ – **ಅಥ ಪರಾ ಯಯಾ ತದಕ್ಷರಂ ಅಧಿಗಮ್ಯತೇ** – "ಯಾವುದರಿಂದ ಆ ಅಕ್ಷರವು ಅರಿಯಲ್ಪಡುತ್ತದೊ ಅದು ಪರಾವಿದ್ಯೆ". ಶ್ರೀ ಶಂಕರಾಚಾರ್ಯರು **'ಅಕ್ಷರ'** ಎಂಬ ಪದಕ್ಕೆ ಮೂರು ಅರ್ಥಗಳನ್ನು ನೀಡುತ್ತಾರೆ : ತನ್ನ ಮೂಲರೂಪವನ್ನು ಬಿಡದಿರುವುದು (ಅಕ್ಷರ), ಕ್ಷೀಣವಾಗದಿರುವುದು (ಅಕ್ಷಯ) ಮತ್ತು ಯಾವ ದೋಷವೂ ಇಲ್ಲದಿರುವುದು (ಅಕ್ಷತ). **ಯಥಾ ಸೌಮ್ಯ ಏಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್** – "ಹೇಗೆ, ಒಂದು ಮಣ್ಣು ಮುದ್ದೆಯನ್ನು ಅರಿತರೆ ಮಣ್ಣಿನಿಂದಾದ ಎಲ್ಲವನ್ನು ಅರಿತಂತಾಗುವುದೊ," ಹಾಗೆಯೇ ಆ ಅಕ್ಷರವನ್ನು ಅರಿತರೆ ಇಡೀ ಜಗತ್ತನ್ನೇ ಅರಿತಂತಾಗುತ್ತದೆ. ಈ ಜಗತ್ತಿನಲ್ಲಿ ಎಲ್ಲವನ್ನೂ ಅರಿಯುವುದಕ್ಕಾಗುವುದಿಲ್ಲ. ನಾವು ಅರಿಯುತ್ತ ಹೋದಷ್ಟು ನಮ್ಮ ಅಜ್ಞಾನದ ಅರಿವು ಅಧಿಕವಾಗುತ್ತ ಹೋಗುತ್ತದೆ. ಈ ಅಜ್ಞಾನದ ಅರಿವೇ ಆತ್ಯಂತಿಕ ಜ್ಞಾನವನ್ನು ನೀಡುತ್ತದೆ. ಶತ್ರುಸೈನ್ಯದಲ್ಲಿ ಒಬ್ಬೊಬ್ಬರೇ ಸೈನಿಕರನ್ನು ನಾವು